# ಬಿದರಗುಪ್ಪೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಬಿದರಗುಪ್ಪೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562107.

ಕ್ರ.ಸಂಖ್ಯೆ: ಬಿ.ಗ್ರಾ.ಪಂ.ಸಂಖ್ಯೆ:139/2021-22 ದಿನಾಂಕ : ದಿನಾಂಕ: 18.11.2021

ರವರಿಗೆ,
ಸದಸ್ಯ ಕಾರ್ಯದರ್ಶಿಗಳು,
ಉಪನಗರ ವರ್ತುಲ ರಸ್ತೆ (ಎಸ್ ಟಿ ಆರ್ ಆರ್)
ಯೋಜನಾ ಪ್ರಾಧಿಕಾರ ಹಾಗೂ ಮಹಾನಗರ ಯೋಜಕರು, ಬೆಂ.ಮ.ಪ್ರ.ಪ್ರಾ.

## ನಿರಕ್ಷೇಪಣಾ ಪ್ರಮಾಣ ಪತ್ರ

**ಮೆ. ಕೋಲೋಸಾಲ್ ಡೆವಲಪರ್ಸ್ ಪ್ರೈ.ಲಿ. ಇದರ ಪ್ರತಿನಿಧಿಯಾದ ಶ್ರೀ ಅಮಿತ್ ಅಗರವಾಲ್ ಮತ್ತು ಶ್ರೀ ಪ್ರಿತೇಶ್ ಜಾವೇರಿ,** ಸೌಲ್ಸ್ ಪೇಸ್ ಪ್ಯಾರಾಡಿಗ್ಮ ಸರ್ವೇ ನಂ 90/2, 90/3 3ನೇ ಮಹಡಿ ಬಿ ವಿಂಗ್ 303 ಔಟರ್ ರಿಂಗ್ ರೋಡ್ ಮಾರತಹಳ್ಳಿ ಬೆಂಗಳೂರು 560037. ಇವರು ಬಿದರಗುಪ್ಪೆ ಗ್ರಾಮ ಪಂಚಾಯಿತಿಗೆ ದಿನಾಂಕ:20.11.2021ರಂದು ನಿರಕ್ಷೇಪಣಾ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ, ಸದರಿಯವರು ನೀಡಿರುವ ಅರ್ಜಿಯನ್ನು ಪರಿಶೀಲಿಸಲಾಗಿ ಸದರಿ ಜಮೀನುಗಳು ಮಾನ್ಯ ಜಿಲ್ಲಾಧಿಕಾರಿಗಳವರಿಂದ ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಪರಿವರ್ತನೆಗೊಂಡಿದ್ದು ಮತ್ತು STRRPA/TP/SP-LAO/18/2021-22 Date:12/11/2021 ಆದೇಶದಂತೆ ಏಕ ನಿವೇಶನ ನಕ್ಷೆ ಅನುಮೋದನೆಯಾಗಿರುವ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಂಡ್ಲಬೆಲೆ ಗ್ರಾಮದ ಸರ್ವೆ ನಂ.81/1ರಲ್ಲಿ 0-11ಗುಂಟೆ, 81/2ರಲ್ಲಿ 1-00ಎಕರೆ ಮತ್ತು 81/3ಪಿರಲ್ಲಿ 0-18¾ ಗುಂಟೆ ಒಟ್ಟು 1 ಎಕರೆ 29¾ ಗುಂಟೆ ಜಮೀನಿನಲ್ಲಿ 35 ವಸತಿ ಕಟ್ಟಡಗಳನ್ನು ಕಟ್ಟಲು ಯೋಜನೆಯನ್ನು ಉದ್ದೇಶಿಸುತ್ತಾರೆ ಇವರು ನಿರ್ಮಿಸುವ ವಸತಿ ಕಟ್ಟಡಗಳಿಗೆ ಬೇಕಾಗಿರುವ ನೀರಿನ ಅವಶ್ಯಕತೆ ಇದ್ದು ಒಟ್ಟು 250 ಕೆಎಲ್ ಪ್ರತಿ ದಿನಕ್ಕೆ ನಮ್ಮ ಪಂಚಾಯಿತಿ ವತಿಯಿಂದ ಪೂರೈಸಲು ಈ ಮೂಲಕ ಅನುಮತಿಯನ್ನು ಕೊಟ್ಟಿರುತ್ತೇವೆ. ಅದರೆ ಸದರಿಯವರು ಕೊರೆತೆಯನ್ನು ನೀಗಿಸಲು ನಮ್ಮ ಪಂಚಾಯಿತಿಗೆ ತಗಲುವ ವೆಚ್ಚಗಳಿಗೆ ಜವಾಬ್ದಾರರಾಗಿರುತ್ತಾರೆ.

ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೊಳವೆ ಬಾವಿಗಳ ನೀರು ಉತ್ತಮವಾಗಿದ್ದು, ಗೃಹ ಬಳಕೆಗೆ ಯೋಗ್ಯವಾಗಿರುತ್ತದೆ. ನಮ್ಮ ಪಂಚಾಯಿತಿ ವ್ಯಾಪ್ತಿಯಲಿ ನೀರಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ವಿವರುಗಳಿರುತ್ತವೆ.

1. ಬಿದರಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಕಂದಾಯ ಗ್ರಾಮಗಳಿದ್ದು 2 ಮಜರಾ ಗ್ರಾಮಗಳಿರುತ್ತವೆ.
2. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ಜನಸಂಖ್ಯೆ 9628 (2011ರ ಜನಗಣತಿ ಪ್ರಕಾರ) ಇರುತ್ತದೆ.
3. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು ಕೊಳವೆ ಬಾವಿಗಳ ಸಂಖ್ಯೆ–30.
4. ಒಟ್ಟು ನೀರು ಶೇಖರಣಾ ಟ್ಯಾಂಕ್ ಗಳ ಸಂಖ್ಯೆ–05.
5. ನೀರು ಸರಬರಾಜು ವೇಳೆ ಬೆಳಗ್ಗೆ 6ರಿಂದ ರಾತ್ರಿ 10 ಘಂಟೆಯವರೆಗೆ (ವಿದ್ಯುತ್ ಸರಬವರಾಜಿನ ಆಧಾರದ ಮೇಲೆ).
6. ಹೊಸ ವಸತಿ ಕಟ್ಟಡಗಳಿಗೆ ಅನುಮತಿ ಕೊಟ್ಟಿರುವ ನೀರಿನ ಪ್ರಮಾಣ 250 ಕೆಎಲ್ (ವಿವರಗಳನ್ನು ಲಗತ್ತಿಸಿದೆ).

ವಿಶೇಷ ಸೂಚನೆ:– ಅನುಮೋದಿತ ಮತ್ತು ಅಭಿವೃದ್ದಿಪಡಿಸಿದ ವಸತಿ ಬಡಾವಣೆಯನ್ನು ನಮ್ಮ ಪಂಚಾಯಿತಿಗೆ ವರ್ಗಾವಣೆಗೊಂಡ ನಂತರ ಗ್ರಾಮ ಪಂಚಾಯಿತಿ ಕಾನೂನಿನಡಿಯಲ್ಲಿ ನೀರು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿಲಾಗುವುದು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬಿದರಗುಪ್ಪೆ ಗ್ರಾಮ ಪಂಚಾಯಿತಿ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು
ಬೆಂಗಳೂರು ನಗರ ಜಿಲ್ಲೆ